ಅಥವಾ ಅವರಿಗೆ ಇದ್ದಂಥ ಜಾಗವನ್ನು ಅವರಿಗೇ ಭೂ ಮಂಜೂರಾತಿ ಮಾಡತಕ್ಕಂಥ ಕೆಲಸ ಎಲ್ಲಿ ಆಗಿದೆ ಎನ್ನುವ ಉತ್ತರವನ್ನು ತಾವು ಹೇಳಬೇಕು.

**ಶ್ರೀ ಎ. ನಾರಾಯಣಸ್ವಾಮಿ :** – ಮಾನ್ಯ ಅಧ್ಯಕ್ಷರೆ, ನಾನು ಕಾರವಾರಕ್ಕೆ ಭೇಟಿ ನೀಡಿದ್ದೆ. ಹೆಚ್.ಡಿ. ಕೋಟೆಗೆ ಭೇಟಿ ನೀಡಿದ್ದೇನೆ. ಅರಣ್ಯ ಪ್ರದೇಶದಲ್ಲಿಯೂ ಸಹ 10–25 ಕಿ.ಮೀ. ಓಡಾಟ ಮಾಡಿದ್ದೇನೆ. ಆ ಕೊರವ ಸಮಾಜದ ಸಮಸ್ಯೆಯನ್ನು ಅರ್ಥ ಮಾಡಿಕೊಂಡಿದ್ದೇನೆ. ಕಂದಾಯ ಇಲಾಖೆಯ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಮತ್ತು ನಾವೆಲ್ಲಾ ಜಂಟಿಯಾಗಿ ಕುಳಿತುಕೊಂಡು ಅವರಿಗೆ ಭೂಮಿಯನ್ನು ಕೊಡಿಸುವ ಕೆಲಸ ಮಾಡಿ 'ಆಶ್ರಯ' ಯೋಜನೆಯಲ್ಲಿ ನಿವೇಶನಗಳನ್ನು ಕೊಟ್ಟು ಮನೆ ನಿರ್ಮಾಣ ಮಾಡಿಸುತ್ತೇವೆ.

**ಶ್ರೀ ಬಿ. ರಮಾನಾಥ ರೈ :** – ಕಾರವಾರ ಜಿಲ್ಲೆಗೆ ಹೋಗಿದ್ದೆ ಎಂದು ತಾವು ಹೇಳಿದಿರಿ. ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ಈ ಸಮಸ್ಯೆಯ ಬಗ್ಗೆ ಎಲ್ಲಾ ಅಧಿಕಾರಿಗಳನ್ನು ಕರೆಸಿ, ಅವರಿಗೆ ಬೇಕಾದಂತಹ ಜಮೀನನ್ನು ಆದಷ್ಟು ಶೀಘ್ರವಾಗಿ ಒದಗಿಸುವಂತಹ ಕೆಲಸ ಮಾಡಿ, ಏಕೆಂದರೆ ಮನೆ ಮಂಜೂರಾತಿ ಆಗಿದೆ ಮಂಜೂರಾತಿ ಆಗಿ, ಮನೆ ಆಗಿಲ್ಲವೆನ್ನುವ ನೋವು ಅದರಲ್ಲಿದೆ. ದುಡ್ಡಿದೆ, ಮನೆ ಮಂಜೂರಾತಿ ಆಗಿದೆ. ಅದರ ಮನೆ ಕಟ್ಟಿಕೊಳ್ಳುವಂತಹ ಪರಿಸ್ಥಿತಿಯಲ್ಲಿ ಅವರಿಲ್ಲ.

**ಶ್ರೀ ಎ. ನಾರಾಯಣಸ್ವಾಮಿ :** – ಸಂಬಂಧಪಟ್ಟವರೊಡನೆ ಚರ್ಚೆ ಮಾಡಿ, ನಾವೇ ಬಂದು ಆ ಕೆಲಸವನ್ನು ಮಾಡಿಸುತ್ತೇನೆ.

**ಅಧ್ಯಕ್ಷರು :** – ಮಾನ್ಯ ಎನ್. ಸಂಪಂಗಿಯವರು, ಹಾಜರಿಲ್ಲ, ಮಾನ್ಯ ಹೆಚ್.ಡಿ. ರೇವಣ್ಣನವರು ಹಾಜರಿಲ್ಲ. ಡಾ. ಹೆಚ್.ಸಿ. ಮಹದೇವಪ್ಪನವರು, ಹಾಜರಿಲ್ಲ. ಮಾನ್ಯ ಬಿ.ಕೆ. ಸಂಗಮೇಶ್ವರನವರು, ಹಾಜರಿಲ್ಲ, ಮಾನ್ಯ ಹೆಚ್. ಹಾಲಪ್ಪನವರು ಪ್ರಶ್ನೆ ಕೇಳುವುದು.

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು

58 : (576)

**ಶ್ರೀ ಹಾಲಪ್ಪ. ಹೆಚ್ (ಸೊರಬ)**

ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಹಾಗೂ ಕಲ್ಯಾಣಾಧಿಕಾರಿಗಳ ಹುದ್ದೆಗಳೆಷ್ಟು.

ಆ) ಆ ಹುದ್ದೆಗಳಿಗೆ ಅಧಿಕಾರಿಗಳನ್ನು ಇದುವರೆವಿಗೂ ನೇಮಿಸದಿರುವುದಕ್ಕೆ ಕಾರಣವೇನು.

ಇ) ಹಾಗಿದ್ದಲ್ಲಿ, ನಿರ್ದಿಷ್ಟ ಕಾಲಾವಧಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)

**ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು)**

ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಒಟ್ಟು 36 ಸಹಾಯಕ ನಿರ್ದೇಶಕರು / ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು ಅದರ ಪೈಕಿ 21 ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಖಾಲಿ ಇರುವ 15 ಹುದ್ದೆಗಳಲ್ಲಿ 11 ಹುದ್ದೆಗಳಲ್ಲಿ ಇತರೇ ಇಲಾಖೆಗಳ ಅಧಿಕಾರಿಗಳನ್ನು ಹೆಚ್ಚುವರಿ ಪ್ರಭಾರದಲ್ಲಿ ಇಡಲಾಗಿದೆ.

ಆ) ಖಾಲಿ ಇರುವ 7 ಸಹಾಯಕ ನಿರ್ದೇಶಕರು / ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಧಿಕಾರಿಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ದಿನಾಂಕ 17–7–2012 ರಂದು ಆದೇಶ ಹೊರಡಿಸಲಾಗಿದೆ. ಆದರಂತೆ ಕ್ರಮ ಜರುಗಿಸಲಾಗುತ್ತಿದೆ.

ಇಲಾಖೆಯಲ್ಲಿ ಗ್ರೂಪ್–ಡಿ ಹುದ್ದೆಗಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಯು ಒಬ್ಬರೇ ಇದ್ದು, ಅವರು ಮುಂಬಡ್ತಿಗೆ ಅರ್ಹರಿರುವುದಿಲ್ಲ. ಆದುದರಿಂದ ಮುಂಬಡ್ತಿ ಮೂಲಕ ಹುದ್ದೆಗಳನ್ನು ತುಂಬಲು ಸಾಧ್ಯವಾಗುತ್ತಿಲ್ಲ.

**ಶ್ರೀ ಹೆಚ್. ಹಾಲಪ್ಪ** : – ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಸರ್ಕಾರ ಈ ವರ್ಷ ಹಿಂದುಳಿದ ವರ್ಗಗಳಿಗೆ ಬೇರೆ ಬೇರೆ ಯೋಜನೆಗಳಲ್ಲಿ 1,000 ಕೋಟಿ ರೂಪಾಯಿಗಳನ್ನು ತೊಡಗಿಸುವ ಉದ್ದೇಶವಿದೆ. ಆದರೆ ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳು ಇಲ್ಲ. ಇವರಿಗೆ 36 ಜನ ಜಿಲ್ಲಾ ಮಟ್ಟದ ಅಧಿಕಾರಿಗಳು ಮಂಜೂರಾಗಿರತಕ್ಕಂಥದ್ದು, ಆದರೆ ಇಲಾಖೆಯಲ್ಲಿ ಕೇವಲ 9 ಜನ ಮಾತ್ರ ಇದ್ದಾರೆ. ಇನ್ನುಳಿದಂತೆ ಬೇರೆ ಬೇರೆ ಇಲಾಖೆಯಿಂದ 27 ಜನ ನಿಯೋಜನೆ ಮೇಲೆ ಅಥವಾ incharge ನಲ್ಲಿದ್ದಾರೆ. ಹೀಗಾದರೆ ಸರ್ಕಾರದ ಉದ್ದೇಶ ಸಫಲವಾಗುತ್ತದೆಯೇ ? ಅವರನ್ನು ನೇಮಕ ಮಾಡಿಕೊಳ್ಳುವ ಉದ್ದೇಶವಿದೆಯೇ ? Permanent ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಸ್ಪಷ್ಟವಾಗಿ ತಿಳಿಸಬೇಕು. ಇಲ್ಲದಿದ್ದರೆ, ಈ ಬಾರಿ ಬಜೆಟ್‌ನಲ್ಲಿ 1,000 ಕೋಟಿ ರೂಪಾಯಿ ತಾವು ಏನು ಒದಗಿಸಿದ್ದೀರಿ,

ಅದನ್ನು ಖರ್ಚು ಮಾಡವುದಕ್ಕಾಗುವುದಿಲ್ಲ ಅಥವಾ ಖರ್ಚು ಮಾಡುವುದಕ್ಕೆ ಹೋದರೆ, ಸರಿಯಾದ ಅಧಿಕಾರಿಗಳಿಲ್ಲದೇ, ನೌಕರವರ್ಗದವರು ಇಲ್ಲದೇ ಮಾಡುವುದಕ್ಕೆ ಹೋದರೆ ಅದು ಅಪವ್ಯವಯವಾಗುತ್ತದೆ. ನೀವು ಆರ್ಥಿಕ ಮಿತವ್ಯಯ ಮಾಡುವುದಕ್ಕೆ ಹೋಗಿ ಸರ್ಕಾರದ ದುಡ್ಡು ಅಪವ್ಯಯವಾಗುತ್ತದೆ. ಇದರ ಬಗ್ಗೆ ದಯವಿಟ್ಟು ಮಾನ್ಯ ಮಂತ್ರಿಗಳು ಗಮನಿಸಬೇಕು ಎಂದು ಹೇಳುತ್ತೇನೆ.

**ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು)** : – 15 vacancies ಇವೆ. ಇದನ್ನು ತುಂಬುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಅದರ ಜೊತೆಗೆ ಮಾಡಿರಲಿಲ್ಲ. ಈಗಾಗಲೇ ಡಿಪಿಆರ್ ಮಾಡಿದ್ದೇವೆ. ಆ ಹುದ್ದೆಗಳನ್ನು ತುಂಬಿಸುತ್ತೇವೆ. KPSC ಗೆ ಪತ್ರ ಬರೆದಿದ್ದು ಅದಷ್ಟು ಬೇಗ ತುಂಬಬೇಕೆಂದು ಹೇಳಿದ್ದೇನೆ. ಅದಕ್ಕಾಗಿ ಈಗಾಗಲೇ P.D.ಯವರು ಅನುಮತಿ ನೀಡಿದ್ದಾರೆ. ಅದು ಬಂದ ತಕ್ಷಣ ಭರ್ತಿ ಮಾಡುವಂಥ ಕೆಲಸ ಮಾಡುತ್ತೇವೆ. ಇಡೀ ಇಲಾಖೆಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟಿರುವ ಹಣವನ್ನು ವೆಚ್ಚ ಮಾಡಲು ತಾವು ಸಮಗ್ರವಾದ ಕೆಲಸ ಮಾಡುತ್ತಿದ್ದೇವೆ. ಖಂಡಿತವಾಗಿಯೂ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತೇವೆ.

**ಶ್ರೀ ಹೆಚ್. ಹಾಲಪ್ಪ** : – ಖರ್ಚಾಗುವಾಗ ಅದು ಸರಿಯಾದ ಜನರಿಗೆ, ಯಾರಿಗೆ ಅರ್ಹತೆ ಇದೆ. ಯಾವ ಫಲಾನುಭವಿಗಳಿಗೆ ಸಿಗಬೇಕು ಅವರಿಗೆ ಮುಟ್ಟಿಸುವುದಕ್ಕೆ ಈಗಿರುವ ಸ್ಥಿತಿಯಲ್ಲಿ ಇವರ ಹತ್ತಿರ machinery ಇಲ್ಲ. ತಾಲ್ಲೂಕು ಮಟ್ಟದಲ್ಲಿ ನಿಮಗೆ ಯಾರಿದ್ದಾರೆ ? ಇಲ್ಲಿಯವರೆಗೂ ಇರಲಿಲ್ಲ. ಈಗಲಾದರೂ ತಾಲ್ಲೂಕು ಮಟ್ಟದಲ್ಲಿ ಒಬ್ಬೊಬ್ಬರನ್ನು ನೇಮಕ ಮಾಡಿದ್ದರೆ ಹೇಗೆ ಖರ್ಚು ಮಾಡುವುದಕ್ಕಾಗುತ್ತದೆ ? ಜಿಲ್ಲಾ ಮಟ್ಟದಲ್ಲಿ ಇಲ್ಲವೆಂದರೆ ಹೇಗಾಗುತ್ತದೆ? ಯಾರೋ PWD ಇಲಾಖೆಯವರೊಬ್ಬರು ನಿಯೋಜನೆಯ ಮೇಲೆ ಇದ್ದಾರೆ. ಶಿಕ್ಷಣ ಇಲಾಖೆಯವರೊಬ್ಬರು ನಿಯೋಜನೆ ಮೇಲೆ ಇದ್ದಾರೆ. ಬೇರೆ ಬೇರೆ ಇಲಾಖೆಯವರು incharge ಇದ್ದಾರೆ. ಏನೆಂದರೆ, ದೇವರಾಜು ಅರಸು ಹಿಂದುಳಿದ ವರ್ಗಗಳ ಕಾರ್ಪೋರೇಷನ್ ಕೂಡ ಅದೇ ಸ್ಥಿತಿಯಲ್ಲಿದೆ. ಒಂದೊಂದು ಜಿಲ್ಲೆ, ತಾಲ್ಲೂಕಿನಲ್ಲಿ ಸುಮಾರು 8,000 ಅರ್ಜಿಗಳು ಬರುತ್ತವೆ. ಅದನ್ನು ಯಾರು ವಿಲೇವಾರಿ ಮಾಡುತ್ತಾರೆ. ಎಷ್ಟು ಜನ ಬೇಕು ? ಎಲ್ಲಿದಾರೆ ? ಹೇಗಾದರೂ ಒಂದು Plan ಮಾಡಿಕೊಂಡಿರುತ್ತೇವೆ ಖರ್ಚಾಗುತ್ತದೆ ಎಂದು ಹಾಗೆ ಯೋಚನೆ ಮಾಡಬಾರದು. ಸರಿಯಾಗಿ ಪರಿಣಾಮಕಾರಿಯಾಗಿ

ಸಿಗಬೇಕಾದವರಿಗೆ ಸಿಗಬೇಕು. ಯಾರಿಗೆ ಸಿಗಬೇಕೋ ಅವರಿಗೇ ಸಿಗುವ ಹಾಗೆ, ನೀವು ಸೌಕರರನ್ನು ನೇಮಕ ಮಾಡಿಕೊಳ್ಳದಿದ್ದರೆ, ಆರ್ಥಿಕ ಮಿತವ್ಯಯ ಮಾಡಿಕೊಂಡರೆ ನಮ್ಮ ಹಣವೆಲ್ಲಾ ಅಪವ್ಯಯವಾಗುತ್ತದೆ.

**ಶ್ರೀ ಎ. ನಾರಾಯಣಸ್ವಾಮಿ :** – DPR ಆಗಿದೆ. ಅದಷ್ಟು ಬೇಗ ಈ ಒಂದು ಹುದ್ದೆಗಳನ್ನು ತುಂಬುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಹೆಚ್. ಹಾಲಪ್ಪ :** – ತಾಲ್ಲೂಕು ಮಟ್ಟದಲ್ಲಿ ಏನು ಮಾಡಿದ್ದೀರಿ ?

**ಶ್ರೀ ಎ. ನಾರಾಯಣಸ್ವಾಮಿ :** – ಈಗಾಗಲೇ ತಾಲ್ಲೂಕು ಮಟ್ಟದಲ್ಲಿ incharge ಕೊಟ್ಟಿದ್ದೇವೆ. ಆದರೂ ಸಹ ಇರುವ ವ್ಯವಸ್ಥೆ ಏನು ಮಾಡಬೇಕೋ ಅದನ್ನು ಮಾಡಿದ್ದೇವೆ. ಇಲಾಖೆಯನ್ನು ಯಾವ ರೀತಿ ಸದೃಢ ಮಾಡಬೇಕೋ ಆ ನಿಟ್ಟಿನಲ್ಲಿ ಎಲ್ಲಾ ಪತ್ರ ವ್ಯವಹಾರಗಳನ್ನು ಮಾಡಿ ಅದನ್ನು ತುಂಬುತ್ತೇವೆ.

**ಅಧ್ಯಕ್ಷರು :** – ಮಾನ್ಯ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ನರಿಬೋಳ್, ಹಾಜರಿಲ್ಲ. ಮಾನ್ಯ ಎಂ. ಶ್ರೀನಿವಾಸ್‌ರವರು, ಹಾಜರಿಲ್ಲ. ಮಾನ್ಯ ಇ. ತುಕರಾಮ್‌ರವರು ಪ್ರಶ್ನೆ ಕೇಳುವುದು.

**ಸಂಡೂರು ಬಸ್ ಡಿಪೋದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ**

830

**ಶ್ರೀ ತುಕಾರಾಮ್. ಇ.**

ಅ) ಸಂಡೂರು ಪಟ್ಟಣದಲ್ಲಿ ಹೊಸದಾಗಿ ಸಾರಿಗೆ ಡಿಪೋ ಉದ್ಘಾಟನೆಗೊಂಡು ಎರಡು ವರ್ಷಗಳಾದರೂ ಅಲ್ಲಿ ಮೂಲಭೂತ ಸೌಕರ್ಯವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಡಿಪೋ ಒಳಗೆ ಡಾಂಬರೀಕರಣ, ನೀರು ಮುಂತಾದವು)

ಆ) ಹಾಗಿದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಹೊಸದಾಗಿ ಡಿಪೋ ಪ್ರಾರಂಭವಾದಾಗಿನಿಂದ ಹೊಸ ಬಸ್ಸುಗಳ ನಿಲುಗಡೆಗೆ ವ್ಯವಸ್ಥೆ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹೊಸ ಬಸ್ಸುಗಳನ್ನು ಹಂಚಿಕೆ ಮಾಡಲು ತೊಂದರೆಗಳೇನು ?